# 30 ವರ್ಷ, 30000 ಹಾವು!

ರಾಯಚೂರಿನ ಅಫ್ಸರ್ ಹುಸೇನ್ ಹಾವುಗಳ ಬಗ್ಗೆ ಜನ ಜಾಗೃತಿ ಮೂಡಿಸುವ ಕೆಲಸದಲ್ಲಿ ತೊಡಗಿರುವ ಪರಿಸರಪ್ರೇಮಿ. ಸಾವಿರಾರು ಹಾವುಗಳನ್ನು ಸಂರಕ್ಷಿಸಿರುವ ಹಿರಿಮೆ ಅವರದು.

■ ಈರಣ್ಣ ಬೆಂಗಾಲಿ



ರಾಯಚೂರಿನ ಉರಗಪ್ರೇಮಿ ಅಫ್ಸರ್ ಹುಸೇನ್ ಕಳೆದ ಮೂವತ್ತು ವರ್ಷಗಳಿಂದ ಹಾವುಗಳ ಸಂರಕ್ಷಣೆಯ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಚಿಕ್ಕಂದಿನಿಂದಲೂ ವನ್ಯಜೀವಿಗಳ ಬಗ್ಗೆ ಅವರಿಗೆ ಆಸಕ್ತಿ. ಶಾಲೆಯಲ್ಲೊಮ್ಮೆ ಎನ್.ಸಿ.ಸಿ. ಕ್ಯಾಂಪ್ ಜೊತೆ ಬೆಳಗಾವಿಗೆ ತೆರಳಿದ್ದಾಗ ಹಾವುಗಳ ಸಂರಕ್ಷಣೆಯ ಬಗ್ಗೆ ಉಪನ್ಯಾಸ ಕೇಳುವ ಅವಕಾಶ ದೊರೆಯಿತು. ಅಂದಿನಿಂದ ಹಾವುಗಳ ಬಗ್ಗೆ ವಿಶೇಷ ಕಾಳಜಿ ಬೆಳೆಯಿತು.

ಅಫ್ಸರ್, ಹಾವುಗಳನ್ನು ಹಿಡಿಯುವ ನಾಲ್ಕು ತಿಂಗಳ ತರಬೇತಿ ಪಡೆದಿದ್ದಾರೆ. ಆಗುಂಬೆಯ 'ಸ್ನೇಕ್ ರಿಸರ್ಚ್ ಸೆಂಟರ್' ನಡೆಸುವ ಪರೀಕ್ಷೆಯಲ್ಲೂ ಉತ್ತೀರ್ಣರಾಗಿದ್ದಾರೆ.

ಬಿಸಿಲನಾಡು ರಾಯಚೂರಿನಲ್ಲಿ ಹಾವುಗಳು ಹೆಚ್ಚು. ಹಾಗಾಗಿ ಉರಗ ತಜ್ಞ ಅಫ್ಸರ್ ಅವರಿಗೆ ಕೆಲಸವೂ ಹೆಚ್ಚು. ಕರೆ ಬಂದಕಡೆ ಹೋಗಿ, ಹಾವುಗಳನ್ನು ಹಿಡಿದು ಅರಣ್ಯಪ್ರದೇಶಕ್ಕೆ ಬಿಡುತ್ತಾರೆ. ಅಫ್ಸರ್ ಉರಗಪ್ರೇಮಿಯಷ್ಟೇ ಅಲ್ಲ – ಕಾಡು ಬೆಕ್ಕು, ಉಡ ಸೇರಿದಂತೆ ಅನೇಕ ವನ್ಯಜೀವಿಗಳನ್ನೂ ಉಳಿಸಿದ್ದಾರೆ. ನಾಡಿಗೆ ಬಂದ ವನ್ಯಜೀವಿಗಳನ್ನು ಸುರಕ್ಷಿತವಾಗಿ ಕಾಡಿಗೆ ಬಿಡುವ ವ್ಯವಸ್ಥೆ ಮಾಡುತ್ತಾರೆ.

ಅಫ್ಸರ್ ಈವರೆಗೆ ರಾಯಚೂರಿನಲ್ಲಿ 36 ಬಗೆಯ ಹಾವುಗಳನ್ನು ಕಂಡಿದ್ದಾರಂತೆ. 30000ಕ್ಕೂ ಹೆಚ್ಚು ಹಾವುಗಳನ್ನು ಹಿಡಿದು ಅರಣ್ಯಪ್ರದೇಶಕ್ಕೆ ಬಿಟ್ಟಿದ್ದಾರೆ. ಶಾಲಾ ಕಾಲೇಜುಗಳ ಕಾರ್ಯಕ್ರಮಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಪ್ರಕೃತಿಯಲ್ಲಿ ಹಾವುಗಳ ಮಹತ್ವವನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದಾರೆ.

ರಾಯಚೂರಿನಲ್ಲಿ 'ಸ್ನೇಕ್ ಪಾರ್ಕ್' ಮಾಡುವ ಉದ್ದೇಶ ಅವರದು. ತಮ್ಮ ಕನಸನ್ನು ರಾಯಚೂರು ಜಿಲ್ಲಾಡಳಿತದ ಜೊತೆ ಹಂಚಿಕೊಂಡಿದ್ದಾರೆ. ತಮ್ಮೊಬ್ಬರಿಂದಲೇ ಹಾವುಗಳ ಉಳಿಸುವಿಕೆ ಕಷ್ಟ ಎನ್ನುವುದು ಅವರಿಗೆ ಗೊತ್ತು. ಹಾಗಾಗಿ, ತಮ್ಮ ಸಂಪರ್ಕಕ್ಕೆ ಬಂದ ಹದಿನಾಲ್ಕು ಜನರಿಗೆ ಹಾವು ಹಿಡಿಯುವ ತರಬೇತಿ ನೀಡಿದ್ದಾರೆ. ಆ ಮೂಲಕ ಹಾವುಗಳ ಸಂರಕ್ಷಣೆಯ ಆಶಯವನ್ನು ಮತ್ತಷ್ಟು ವ್ಯಾಪಕವಾಗಿಸಿದ್ದಾರೆ.

ಹಾವುಗಳ ಮಹತ್ವದ ಬಗ್ಗೆ ಮತ್ತು ತಾವು ಹಿಡಿದ ಹಾವುಗಳ ಬಗ್ಗೆ ಅಫ್ಸರ್, ಯೂಟ್ಯೂಬ್ ಚಾನೆಲ್ ಮೂಲಕ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. Snake saver of Afsar hussain ಎಂದು ಯೂಟ್ಯೂಬ್‌ನಲ್ಲಿ ಹುಡುಕಿದರೆ, ಅವರು ಕಾರ್ಯಾಚರಣೆ ನಡೆಸಿದ ಹಾವುಗಳ ಸಂರಕ್ಷಣೆಯ ದೃಶ್ಯಗಳನ್ನು ನೋಡಬಹುದಾಗಿದೆ.

### ಹಾವುಗಳ ಬಗ್ಗೆ ಅಫ್ಸರ್ ಹೇಳೋದು

- ಹಾವು ಕಂಡರೆ ಅದನ್ನು ಸಾಯಿಸಲು ಅಥವಾ ಹಿಡಿಯಲು ಮುಂದಾಗಬೇಡಿ. ಹಾವು ಹಿಡಿಯುವಲ್ಲಿ ಪಳಗಿದವರನ್ನೇ ಕರೆದು ಸಂರಕ್ಷಿಸಿ.
- ಅನೇಕರು ಫೋಟೊ–ಸೆಲ್ಫಿ ಹುಚ್ಚಿನಿಂದ ಹಾವಿನೊಂದಿಗೆ ಆಟವಾಡುವುದು ಜೀವಕ್ಕೆ ಅಪಾಯಕರ.
- ನಾನು ಮೂವತ್ತು ವರ್ಷಗಳಿಂದ ಹಾವು ಹಿಡಿಯುತ್ತೇನಾದರೂ ಈಗಲೂ ಸೂಕ್ತ ಮುಂಜಾಗ್ರತಾ ಕ್ರಮಗಳೊಂದಿಗೆ ಹಾವು ಹಿಡಿಯುತ್ತೇನೆ. ಅತಿ ಆತ್ಮವಿಶ್ವಾಸದೊಂದಿಗೆ ಎಂದೂ ಕಾರ್ಯಾಚರಣೆಗೆ ಇಳಿಯುವುದಿಲ್ಲ. ಹಾವಿನ ಜೀವ ಮತ್ತು ನನ್ನ ಜೀವದ ಬಗ್ಗೆ ನಿರ್ಲಕ್ಷ್ಯವಹಿಸುವುದಿಲ್ಲ.
- ಮನುಷ್ಯರಿಂದ ಹಾವುಗಳಿಗೆ ಹಾನಿಯೇ ಹೊರತು, ಹಾವುಗಳು ತಾವಾಗಿಯೇ ಮನುಷ್ಯರಿಗೆ ಹಾನಿ ಮಾಡಲಾರವು.
- ಹಾವುಗಳ ಬಗ್ಗೆ ಭಯ ಬಿಡಿ. ಮೂಢನಂಬಿಕೆಗಳಿಂದ ಹೊರಬನ್ನಿ.

ರಾಯಚೂರು ನಗರದಲ್ಲಿ ಹಿಡಿದ ಹಾವುಗಳನ್ನು ತಂದು ಅಫ್ಸರ್ ತಮ್ಮ ಮನೆಯಲ್ಲಿ ಇರಿಸಿಕೊಂಡು, ಪ್ರತಿ ರವಿವಾರ ಅವುಗಳನ್ನು ಸುರಕ್ಷಿತ ಪ್ರದೇಶಕ್ಕೆ ಬಿಡುತ್ತಾರೆ. ಹಾವುಗಳನ್ನು ಕಾಡಿಗೆ ಬಿಡುವಾಗ ಜನರನ್ನು ಒಟ್ಟುಗೂಡಿಸಿ, ಅವರಲ್ಲಿ ಹಾವುಗಳ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸುತ್ತಾರೆ. ವಿಷಪೂರಿತವಲ್ಲದ ಹಾವುಗಳನ್ನು ಜನರ ಕೈಗೇ ಕೊಟ್ಟು, ಅವರಿಂದಲೇ ಹಾವುಗಳನ್ನು ಕಾಡಿಗೆ ಬಿಡಿಸುತ್ತಾರೆ. ನಾಗರಹಾವಿನಂತಹ ವಿಷಪೂರಿತ ಹಾವುಗಳನ್ನು ಸ್ವತಃ ತಾವೇ ಕೈಗೆ ಗ್ಲೌಸ್ ಹಾಕಿಕೊಂಡು ಕಾಡಿಗೆ ಬಿಡುವ ಕೆಲಸ ಮಾಡುತ್ತಾರೆ. ಅಫ್ಸರ್ ಅವರಂಥ ಪರಿಸರಪ್ರೇಮಿಗಳ ಸಂಖ್ಯೆ ಹೆಚ್ಚಬೇಕಾಗಿದೆ. 'ದಯೆ ಬೇಕು ಸಕಲ ಜೀವಗಳಲ್ಲಿ' ಎನ್ನುವ ಶರಣರ ಮಾತು ವ್ಯಾಪಕವಾಗಬೇಕಾಗಿದೆ.

ಅಫ್ಸರ್ ಸಂಪರ್ಕ: 9900127861.

ಪ್ರತಿಕ್ರಿಯಿಸಿ: feedback@sudha.co.in